**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು**

ದಿನಾಂಕಃ 19ನೇ ಆಗಸ್ಟ್ ತಿಂಗಳು 2026ರಂದು

**ಸಿಸಿ ನಂ.82/2025**

**ಫಿರ್ಯಾದುದಾರರುಃ** ಶ್ರೀ.ಜಿ.ಎಸ್.ಶ್ರೀಧರ ಮೂರ್ತಿ, ಬಿನ್ ಶಂಕರ ನಾರಾಯಣಶೆಟ್ಟಿ
65 ವರ್ಷ, ನಿವೃತ್ತಿ ನೌಕರರು, ವಾಸಃ ನಂ.2073,
2ನೇ ಕ್ರಾಸ್, ಮಾರುತಿ ಬಡಾವಣೆ, ಸರ್ಕಾರಿ ಜೂನಿಯರ್
ಬಾಲಕರ ಕಾಲೇಜು ಹಿಂಭಾಗ, ಹುಣಸೂರು.

**– ವಿರುದ್ಧ –**

**ಆರೋಪಿಃ** ಅಂಬುಜಾ.ಹೆಚ್.ಎಸ್., ಕೋಂ ಅರವಿಂದ.ಕೆ.ಎಸ್.,
38 ವರ್ಷ, ವಾಸಃ ನಂ.20, ಪೂವಯ್ಯ ಅಪಾರ್ಟ್ ಮೆಂಟ್,
ಕೆ.ಹೆಚ್.ಬಿ.ಕಾಲೋನಿ, ಹೂಟಗಳ್ಳಿ, ಮೈಸೂರು.

ಕೆಲಸದ ಸ್ಥಳಃ ಬ್ರೂನಿಸ್ ಪ್ರವೃತ್ತಿ, ಬ್ರಾಂಚ್ –2, ನಂ. 31,
ಗ್ರೂಪ್ – 4, ಕೆ.ಹೆಚ್.ಬಿ. ಕಾಲೋನಿ,
ಹೂಟಗಳ್ಳಿ, ಮೈಸೂರು.

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 351 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ಜಿ.ಎಸ್.ಶ್ರೀಧರ ಮೂರ್ತಿ ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿದಿದೆ |
| ಪ್ರಶ್ನೆ 2: | ಪಿ.ಡಬ್ಲ್ಯು–1 ಜಿ.ಎಸ್.ಶ್ರೀಧರ ಮೂರ್ತಿ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಮತ್ತು ಅವರು ಹುಣಸೂರಿನ ನಿವಾಸಿ ರಮೇಶ್ ಎಂಬ ಸಾಮಾನ್ಯ ಸ್ನೇಹಿತನ ಮೂಲಕ ಹಲವಾರು ವರ್ಷಗಳಿಂದ ಒಬ್ಬರಿಗೊಬ್ಬರು ಪರಿಚಯಸ್ಥರಾಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನೀವು ಮೈಸೂರಿನ ಹೂಟಗಳ್ಳಿಯಲ್ಲಿ ಹಲವಾರು ವರ್ಷಗಳಿಂದ ಬಟ್ಟೆ ವ್ಯಾಪಾರ ಮಾಡುತ್ತಿದ್ದು, ನೀವು ನಿಮ್ಮ ವ್ಯಾಪಾರದ ವೆಚ್ಚವನ್ನು ಪೂರೈಸಲು ಅವರಿಂದ ರೂ.6,50,000/-ಗಳ ಕೈ ಸಾಲವನ್ನು ಫೋನ್ ಪೇ ಮೂಲಕ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೇಲೆ ರೂ.6,50,000/- ಗಳ ಪೈಕಿ ದಿನಾಂಕಃ 15.03.2024ರಂದು ರೂ.2,50,000/-ಗಳನ್ನು ಕರ್ನಾಟಕ ಬ್ಯಾಂಕ್ ಮೂಲಕ, ದಿನಾಂಕಃ 14.03.2024ರಂದು ರೂ.50,000/-ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ, ದಿನಾಂಕಃ 15.03.2024ರಂದು ರೂ.49,000/- ಮತ್ತು ರೂ.25,000/-ಗಳನ್ನು ಕರ್ನಾಟಕ ಬ್ಯಾಂಕಿನ ಎ.ಟಿ.ಎಂ. ಮೂಲಕ, ದಿನಾಂಕಃ 15.03.2024ರಂದು ರೂ.40,000/-ಗಳನ್ನು ಮತ್ತು ದಿನಾಂಕಃ 16.03.2024ರಂದು ರೂ.34,000/-ಗಳನ್ನು ಸ್ಟೇಟ್ ಬ್ಯಾಂಕ್ ಇಂಡಿಯಾ ಬ್ಯಾಂಕಿನ ಎ.ಟಿ.ಎಂ. ಮೂಲಕ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕಃ 16.03.2024ರಂದು ರೂ.50,000/- ಮತ್ತು ರೂ.30,000/-ಗಳನ್ನು, ದಿನಾಂಕಃ 18.03.2024ರಂದು ರೂ.50,000/-, ದಿನಾಂಕಃ 20.03.2024ರಂದು ರೂ.49,000/-, ದಿನಾಂಕಃ |

| | |
|---|---|
| | 21.03.2024ರಂದು ರೂ.8,000/-, ದಿನಾಂಕಃ 04.04.2024ರಂದು ರೂ.10,000/- ಹಾಗೂ ಅದೇ ದಿನ ರೂ.5,000/-ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಶೇಕಡಾ 2ರ ಬಡ್ಡಿಯ ದರದಲ್ಲಿ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಮರುಪಾವತಿಗಾಗಿ ದಿನಾಂಕಃ 27.09.2024ರಂದು ಪಾವತಿಯಾಗುವಂತೆ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹೂಟಗಳ್ಳಿ ಶಾಖೆಯ ಚೆಕ್ ಸಂಖ್ಯೆ 993322 ಅನ್ನು ರೂ.6,50,000/-ಗಳಿಗೆ ಫಿರ್ಯಾದಿದಾರರಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದನ್ನು ಅವರು ತಮ್ಮ ಖಾತೆ ಹೊಂದಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 27.09.2024 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |

| | |
|---|---|
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ಅವರು ತಮ್ಮ ವಕೀಲರ ಮೂಲಕ ನಿಮಗೆ ದಿನಾಂಕಃ 03.10.2024ರಂದು ನೊಂದಾಯಿತ ಅಂಚೆಯ ಮೂಲಕ ನೋಟೀಸ್ ಅನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸನ್ನು ನೀವು ತೆಗೆದುಕೊಳ್ಳದೇ unclaimed ಎಂಬ ಷರದೊಂದಿಗೆ ದಿನಾಂಕಃ 15.10.2024ರಂದು ವಾಪಾಸ್ ಬಂದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ನೋಟೀಸ್ ಬಂದಿಲ್ಲ |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ನಿಮಗೆ ತಿಳುವಳಿಕೆ ಇದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಮರುಪಾವತಿಸದೇ ಇರುವ ಕಾರಣ ನೀವು ನೆಗೋಶಿಯೇಬಲ್ ಇನ್ಸ್ಟುಮೆಂಟ್ಸ್ ಕಾಯಿದೆಯ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶೀದಿಗಳು, ಎರಡು ಅಂಚೆ ಲಕೋಟೆಗಳು, ಅಕೌಂಟ್ ಸ್ಟೇಟ್ಮೆಂಟ್ ಅನ್ನು ಹಾಜರುಪಡಿಸಿ ನಿಪಿ-1 ರಿಂದ ನಿಪಿ-8 ಎಂದು ಗುರುತಿಸಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 12: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ |
| ಪ್ರಶ್ನೆ 13: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 19.08.2026.

Sd/-

**(ಅನಿತ)**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾದಂ., ಹುಣಸೂರು .

ಆರೋಪಿಯ ಸಹಿಃ